

ಯಾರಿದ್ದಾರೆ? ಹೋಗಿ ಯಾರನ್ನಾದರೂ ಕರೆದುಕೊಂಡು ಬರುವುದು ಎಂದು ಯೋಚಿಸಿದಳು. ಇಲ್ಲಿ ಬಿಟ್ಟು ಹೋದರೆ ಹಿಂದೆ ಬರುವಾಗ ಹಲಸು ಇಲ್ಲೇ ಇರುತ್ತೆ ಎಂದು ಹೇಗೆ ಹೇಳುವುದು? ಇನ್ಯಾರಾದರೂ ಎತ್ತಿಕೊಂಡು ಹೋದರೆ? ದನ ತಿಂದು ಹಾಕಿದರೆ? ಸಣ್ಣ ಹಲಸಾಗಿದ್ದರೆ ಸಲೀಸಾಗಿ ತಾನೇ ತಲೆಮೇಲೆ ಇಟ್ಟುಕೊಂಡು ಹೋಗಬಹುದಿತ್ತು, ಆದರೆ ಇದು! ಬಿರಿದ ಬಿರುಕಿನಲ್ಲಿ ಕೈ ಹಾಕಿ ಇಬ್ಭಾಗ ಮಾಡಿ ಅರ್ಧವನ್ನು ಮಾತ್ರ ಗುಡಿಸಲಿಗೊಯ್ಯುವ ಆಲೋಚನೆ ಬಂತು. ಇವತ್ತಿಗೂ ನಾಳೆಗೂ ತಿನ್ನಲು ಸಿಕ್ಕಿದ್ದರಲ್ಲಿ ಅರ್ಧವನ್ನು ಬಿಟ್ಟು ಹೋಗುವುದೇ? ಖಂಡಿತ ಇಲ್ಲ...

ಕ್ಷಣದ ಹಿಂದೆ ಏನೂ ಇಲ್ಲದಿದ್ದ ಸಮಸ್ಯೆ; ಈಗ ಇದ್ದದ್ದನ್ನು ಪೂರ್ತಿ ದಕ್ಕಿಸಿಕೊಳ್ಳುವ ಸಮಸ್ಯೆ!... ಹೆದ್ದಾರಿಯಲ್ಲವೇ, ಯಾರಾದರೂ ಬಂದಾರು. ಎಷ್ಟೇ ಭಾರ ಇದ್ದರೂ ಹೊತ್ತುಕೊಂಡು ಹೋಗುವುದೇ... ಅಂತ ದೃಢ ನಿರ್ಧಾರ ಮಾಡಿ ಸೆರಗನ್ನು ಸುತ್ತಿ ತಲೆಯೊತ್ತು ಮಾಡಿಟ್ಟುಕೊಂಡೇ ಕಾದು ಕುಳಿತಳು.

ಮಾಗಿದ ಹಲಸು. ನಡುವಲ್ಲಿ ಬಿರಿದು ಹೋದುದನ್ನು ಹೊರಳಿಸಿ ರಸ್ತೆ ಬದಿಗೆ ತಂದಾಗ ಮತ್ತಷ್ಟು ಕುಲುಕಿಹೋಗಿ ತನ್ನ ಮಧುರವಾದ ಪರಿಮಳವನ್ನು ಹೊರಸೂಸಲಾರಂಭಿಸಿತ್ತು. ಹಲಸಿನಿಂದ ಸೂಸುವ ಪರಿಮಳ ರುದ್ರಿಯ ಹಸಿವೆಯನ್ನು ಇಮ್ಮಡಿಗೊಳಿಸಿತ್ತು. ಯಾರಾದರೊಬ್ಬರು ಇಲ್ಲಿಂದ ಹಾದುಹೋಗಬಾರದೇ...

ದೂರದಲ್ಲಿ ಒಬ್ಬಾತ ಸೈಕಲ್ ಮೇಲೇರಿ ಹೋಗುತ್ತಿರುವುದು ಕಾಣಿಸಿತು. ಸೈಕಲ್ಲಿನ ಕ್ಯಾರಿಯರ್ ಮೇಲೆ ಎತ್ತಿ ಇಟ್ಟುಕೊಂಡು ಮನೆಗೆ ತಲುಪಿಸಿಕೊಡು, ಒಂದು ತುಂಡು ಹಲಸು ಕೊಡುತ್ತೇನೆ... ಅನ್ನುವುದು... ಆತ 'ಬೇರೆಲ್ಲೋ ಹೋಗ್ತಾ ಇದ್ದೇನೆ' ಅಂದ್ರೆ 'ಎತ್ತಿ ನನ್ನ ತಲೆಮೇಲೆ ಇಡು' ಅನ್ನೋದು... ಅಂತ ಲೆಕ್ಕ ಹಾಕಿ ಎದ್ದು ನಿಂತು ಸೈಕಲ್ಲಿನವನನ್ನು ಕೂಗಿ ಕರೆದಳು. ಮೊದಲು ಕಿವಿಗೆ ಹಾಕಿಕೊಳ್ಳದಿದ್ದರೂ ಬೆನ್ನುಬೆನ್ನಿಗೆ ಕೂಗಿದಾಗ ಆತ ಬಂದ. 'ನಾನೆಲ್ಲೋ ಹೋಗ್ಬೇಕು, ನಿನ್ನದೇನು?' ಅಂದವನಲ್ಲಿ ಬೇರೆ ದಾರಿ ಕಾಣದೆ ಹಲಸನ್ನು ತಲೆಮೇಲೆ ಹೊರಿಸಿಕೊಂಡಳು.

ಇನ್ನು ಗುಡಿಸಲಿನವರೆಗೆ ನಡೆದರೆ ಮುಗಿಯಿತು ಎಂಬ ಸಂತಸ ತಲೆಹೊಕ್ಕು ಭಾರ ಕಡಿಮೆಯೆನಿಸಿತ್ತು. ಬೆಳಗ್ಗೆ ಬಿಟ್ಟು ಬಂದ ಮಕ್ಕಳು ನೆನಪಾದವು. ಎಂಟು ವರ್ಷದ ಮಗಳ ಸುಪರ್ದಿನಲ್ಲಿ ಉಳಿದೆರಡು ಸಣ್ಣ ಮಕ್ಕಳನ್ನು ಬಿಟ್ಟು ಬಂದದ್ದನ್ನು ನೆನಪಿಸುತ್ತಲೇ ರುದ್ರಿಯ ಮೈಯೆಲ್ಲ ಕಂಪಿಸಿತು. ಭಯವಾಯಿತು. ತಾನೊಬ್ಬಳು ಎಂತಹ ಕಟುಕ ತಾಯಿ... ಏನು ಅನಾಹುತ ಮಾಡಿಕೊಂಡವೋ... ಇನ್ನೇನು ಕಾದಿದೆಯೋ... ಎದೆ ಡವಡವ ಹೊಡೆದುಕೊಳ್ಳುತ್ತಿತ್ತು. ತಲೆ ಬೇರೇನೂ ಯೋಚಿಸಲಾಗದ ಸ್ಥಿತಿ ತಲುಪಿತ್ತು. ಹೆಚ್ಚುಕಡಿಮೆ ಓಡುತ್ತಲೇ ಗುಡಿಸಲು ತಲುಪಿದಳು. ಬಾಗಿಲಲ್ಲಿ ಕಾಯುತ್ತಿದ್ದ ಮಕ್ಕಳನ್ನು ಕಂಡಾಗ ಎಲ್ಲ ನೋವು ಮಾಯವಾಗಿ ರುದ್ರಿಗೆ ಸಮಾಧಾನವಾಗಿತ್ತು. ಹಸಿವೆ, ಆಯಾಸದಿಂದ ಹೈರಾಣಾಗಿದ್ದ ರುದ್ರಿಯ ದೇಹ ಕುಸಿದು ವಾಲಿದಾಗ ತಲೆಯ ಮೇಲಿದ್ದ ಹಲಸು ಇಳಿಸುವವರಿಲ್ಲದಿದ್ದರೂ ಗುಡಿಸಲಿನೊಳಗೆ ಸೇರಿತ್ತು.

ಆಯಾಸವಾಗಿದ್ದರೂ ಸಾವರಿಸಿಕೊಂಡು ರುದ್ರಿ ನಸುನಗುತ್ತ ಎದ್ದು ಕುಳಿತಳು. ಬಿದ್ದ ರಭಸಕ್ಕೆ ಮಾಗಿದ್ದ ಹಲಸು ಮತ್ತಷ್ಟು ತೆರೆದುಕೊಂಡಿತ್ತು. ಹಲಸಿನ ಸುವಾಸನೆಗೆ ಬಾಯಿ ಚಪ್ಪರಿಸುತ್ತಿದ್ದ ಮಗಳ ಕೈಯಲ್ಲಿ ಚೂರಿ ತರಿಸಿಕೊಂಡು ನಿಧಾನವಾಗಿ ಹಲಸಿನ ತುಂಡೊಂದನ್ನು ತೆಗೆದು